

ಜ್ಯೋತಿ ಗುಳೇದಗುಡ್ಡ ಅಭಿನಯದ ನಾಟಕ ದೃಶ್ಯ

# ಸವಾಲು ಮೆಟ್ಟಿನಿಂತ ಛಲಗಾತಿಯರು

**ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ 2026**
**ಗಿವ್ ಟು ಗೇನ್**

■ **ಬಸವರಾಜ ಹವಾಲ್ದಾರ**

ಬೇಸಿಗೆ, ಮಳೆ, ಚಳಿ ಯಾವುದೇ ಕಾಲವಿರಲಿ, ಕೊನೆಗಳಿಗೆಯಲ್ಲಿ ಕಲಾವಿದ ಕೈಕೊಡಲಿ, ಬೆರಳೆಣಿಕೆಯಷ್ಟು ಮಾತ್ರ ಪ್ರೇಕ್ಷಕರಿರಲಿ... ನಾಟಕದ ಪ್ರದರ್ಶನ ನಡೆಯಲೇಬೇಕು. ವೃತ್ತಿರಂಗಭೂಮಿಯ ನಾಟಕ ಕಂಪನಿಗಳು ವರ್ಷಪೂರ್ತಿ ಜಾತ್ರೆ, ವಿವಿಧೆಡೆ ಹಾಕುವ ಕ್ಯಾಂಪ್‌ಗಳಲ್ಲಿ ನಾಟಕದ ಪ್ರದರ್ಶನ ನಡೆಯುತ್ತಲೇ ಇರುತ್ತದೆ.

ವೃತ್ತಿರಂಗಭೂಮಿ ನಾಟಕ ಕಂಪನಿಗಳಲ್ಲಿ ನಟಿಸುವ ಕಲಾವಿದರು, ಕೆಲಸಗಾರರು ಪೂರ್ಣ ಪ್ರಮಾಣದಲ್ಲಿ ಕಂಪನಿಯನ್ನೇ ನಂಬಿಕೊಂಡಿರುತ್ತಾರೆ. ಕಲೆಯೇ ಅವರ ಬದುಕಾಗಿರುತ್ತದೆ. ಅವರ ಕುಟುಂಬದ ಜೀವನಾಧಾರವೂ ಆಗಿರುತ್ತದೆ. ಅವರೆಲ್ಲರ ಕುಟುಂಬದ ಆರ್ಥಿಕ ಹೊಣೆ ನಾಟಕ ಕಂಪನಿಗಳ ಮಾಲೀಕರದ್ದಾಗಿರುತ್ತದೆ. ನಾಟಕಗಳು ನಡೆಯಲಿ, ಬಿಡಲಿ. ಕಲಾವಿದರ ಸಂಭಾವನೆ, ನಾಟಕವಾಡಲು ಟೆಂಟ್ ಹಾಕಿದ ಜಾಗದ ಬಾಡಿಗೆ, ನಾಟಕ ಪ್ರದರ್ಶನದ ಅನುಮತಿಗೆ ಪಾವತಿಸಬೇಕಾದ ಶುಲ್ಕ, ಉಳಿದ ಕೆಲಸಗಾರರ ವೇತನ ಸೇರಿದಂತೆ ಎಲ್ಲ ವೆಚ್ಚಗಳನ್ನು ಪಾವತಿಸಲೇಬೇಕು.



ಸುಜಾತಾ ಗುಬ್ಬಿ ನಟನೆಯ ನಾಟಕದ ದೃಶ್ಯ

ಪಂಚ್ ಡೈಲಾಗ್ ಹೊಡೆದು, ತಮ್ಮನ್ನು ತಾವೇ ಅಪಹಾಸ್ಯ ಮಾಡಿಕೊಂಡು ಪ್ರೇಕ್ಷಕರನ್ನು ನಗೆಗಡಲಲ್ಲಿ ತೇಲಿಸುತ್ತಾರೆ. ಕೆಲ ಕಾಲವಾದರೂ ಪ್ರೇಕ್ಷಕರನ್ನು ಜೀವನದ ಜಂಜಾಟ ಮರೆತು ನಕ್ಕು ನಲಿಯುವಂತೆ ಮಾಡುತ್ತಾರೆ. ಆದರೆ, ರಂಗಭೂಮಿಯ ತೆರೆಯ ಹಿಂದಿನ ಬದುಕು ಹಾಗಿಲ್ಲ. ಏಳು–ಬೀಳಿನ ಹಾದಿಯಾಗಿದೆ.

ಟೀವಿ, ಮೊಬೈಲ್ ಬಳಕೆ ಹೆಚ್ಚಾದ ಬಳಿಕ ನಾಟಕಗಳನ್ನು ನೋಡುವವರ ಸಂಖ್ಯೆ ಕಡಿಮೆಯಾಗಿದೆ. ಚಲನಚಿತ್ರದ ಪರಿಣಾಮವೂ ಸೇರಿದೆ. ಪರಿಣಾಮ ವೃತ್ತಿರಂಗಭೂಮಿಯ ಹಲವಾರು ನಾಟಕ ಕಂಪನಿಗಳು ಬಂದ್ ಆಗಿವೆ. ಪುರುಷರೇ ನಾಟಕ ಕಂಪನಿಗಳನ್ನು ನಡೆಸಲು ಹಿಂದೇಟು ಹಾಕುತ್ತಿದ್ದಾರೆ. ಈ ಎಲ್ಲ ಸವಾಲುಗಳ ಮಧ್ಯೆ ಇಬ್ಬರು ಮಹಿಳೆಯರು ನಾಟಕ ಕಂಪನಿಗಳನ್ನು ಮುನ್ನಡೆಸುತ್ತಿದ್ದಾರೆ.

ಬಿಎಸ್‌ಆರ್ ನಾಟಕ ಕಂಪನಿ ಮಾಲೀಕರಾಗಿರುವ ಸುಜಾತಾ ಗುಬ್ಬಿ ಹಾಗೂ ಶ್ರೀ ಸಂಗಮೇಶ್ವರ ಸಾಂಸ್ಕೃತಿಕ ಹಾಗೂ ನಾಟ್ಯ ಸಂಘ ಕಂಪನಿ ನಡೆಸುತ್ತಿರುವ ಜ್ಯೋತಿ ಗುಳೇದುಗಡ್ಡ ರಂಗಭೂಮಿ ಕಲಾವಿದರ ಕುಟುಂಬದಿಂದ ಬಂದವರು. ಇಬ್ಬರೂ ಬಾಲ್ಯದಿಂದಲೇ ನಟನೆ ಮಾಡಿಕೊಂಡು, ನಾಟಕ ಕಂಪನಿಗಳ ಅಂಗಳದಲ್ಲೇ ಬೆಳೆದವರು. ಒಳ–ಹೊರಗನ್ನು ಹತ್ತಿರದಿಂದ ಕಂಡಿರುವ ಇವರು, ಈಗ ನಾಟಕದ ಕಂಪನಿಗಳ ಮಾಲೀಕರಾಗಿ ಮುನ್ನಡೆಸುತ್ತಿದ್ದಾರೆ. ಕಂಪನಿಯ ಏಳು–ಬೀಳುಗಳ ಕುರಿತು ‘ಸುಧಾ’ದೊಂದಿಗೆ ತಮ್ಮ ಅನುಭವ ಹಂಚಿಕೊಂಡಿದ್ದಾರೆ.